### ಸನಾತನದ ಸಾಧಕರ ಸಾಧನೆಯ

### ಪ್ರಯಾಣ : ದಿ. (ಸೌ.) ಸುಜಾತಾ ಕುಲಕರ್ಣಿ - ಖಂಡ ೩

# ದಿ. (ಸೌ.) ಸುಜಾತಾ ಕುಲಕರ್ಣಿಯವರ ಮೃತ್ಯುತ್ತರ ವಿಧಿಗಳ ಹಿಂದಿನ ಅಧ್ಯಾತ್ಮಶಾಸ್ತ್ರ

(Spiritual science in the death rites
performed for (Late) Mrs Sujata Kulkarni) ಕನ್ನಡ (Kannada)


**ಸಂಕಲನಕಾರರು**

**ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷ ಮಾಡುವ**

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

(‘ಸಚ್ಚಿದಾನಂದ ಪರಬ್ರಹ್ಮ’ ಬಿರುದಿನ ಸ್ಪಷ್ಟೀಕರಣವನ್ನು ‘ಪುಟ ೯’ ರಲ್ಲಿ ಓದಿ.)



**ಸನಾತನ ಸಂಸ್ಥೆ**


**ಆಗಸ್ಟ್ ೨೦೨೨ ರ ವರೆಗೆ ಸನಾತನದ ೩೫೭ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಒರಿಯಾ, ಪಂಜಾಬಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೯೦,೪೭,೦೦೦ ಪ್ರತಿಗಳು !**

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ಇ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ** : ಸೌ. ಮೀರಾ ಮಾನೆ ಮತ್ತು ಕು. ಸಾಧನಾ ಸಾವಂತ

**First Edition** : Navaratrarambha, Kaliyug Varsh 5124
(26th September 2022)

Translated from the original Marathi text 'Kai. (Sau.) Sujata Kulkarni yanchya mrutyuttar vidhinmagil Adhyatmashastra'

**ಅನುವಾದಕರು** : ಶ್ರೀ. ಗಣೇಶ ರಾಜಾರಾಮ ಕಾಮತ್
ಮತ್ತು ಸೌ. ಪ್ರಜ್ಞಾ ರಾವ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 110/-

**ISBN :** 978-93-92952-62-3

ಗ್ರಂಥ ಕ್ರ. : 336

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

## ಪ್ರಸ್ತುತ ಗ್ರಂಥದ ಅನುಕ್ರಮಣಿಕೆ


ಅಧ್ಯಾಯ ೧ : ಸೌ. ಕುಲಕರ್ಣಿ ಇವರ ಮೃತ್ಯುವಿನ ನಂತರ ಕುಟುಂಬದವರ, ಪಾರ್ಥಿವದ (ಮೃತ್ಯುವಿನ ನಂತರ ಆ ಜೀವಕ್ಕೆ ಪಿತೃಪದವಿ ಪ್ರಾಪ್ತವಾಗುವ ತನಕದ ಸ್ಥಿತಿ) ಮತ್ತು ವಾತಾವರಣದ ಸಂದರ್ಭದಲ್ಲಿ ಅರಿವಾದ ವೈಶಿಷ್ಟ್ಯಗಳು ೧೧

ಅಧ್ಯಾಯ ೨ : ಸೌ. ಕುಲಕರ್ಣಿಯವರ ಮೃತ್ಯುವಿನ ದಿನದಂದು ಅಂತ್ಯವಿಧಿಗಳ ಸಂದರ್ಭದಲ್ಲಿ ಬಂದ ಅನುಭೂತಿಗಳು ೨೦

ಅಧ್ಯಾಯ ೩ : ಸೌ. ಕುಲಕರ್ಣಿಯವರ ಅಗ್ನಿಸಂಸ್ಕಾರದ ಸಮಯದಲ್ಲಿ ಮಾಡಿದ ಸೂಕ್ಷ್ಮದಲ್ಲಿನ ಪರೀಕ್ಷಣೆ ೨೬

ಅಧ್ಯಾಯ ೪ : ಸೌ. ಕುಲಕರ್ಣಿಯವರ ಮೃತ್ಯುವಿನ ನಂತರದ ವಿಧಿಗಳನ್ನು ಮಾಡುವಾಗ ಅವರ ಮಗಳು ಕು. ತೃಪ್ತಿ ಮತ್ತು ಪುರೋಹಿತ ಸಾಧಕರಿಗೆ ಆದ ತೊಂದರೆಗಳು ಮತ್ತು ಬಂದ ಅನುಭೂತಿಗಳು ೨೮

ಅಧ್ಯಾಯ ೫ : ಅಮ್ಮನ ಅನಾರೋಗ್ಯದ ಸಮಯದಲ್ಲಿ ಸಾಧಕಿಯರು ಮಾಡಿದ ಸೇವೆಯಿಂದ 'ಸನಾತನವು ನಮ್ಮ ಕುಟುಂಬವಾಗಿದೆ' ಎಂಬ ಪರಾತ್ಪರ ಗುರು ಡಾಕ್ಟರರ ಉದ್ಗಾರವು ಸಾರ್ಥಕವಾದುದರ ಬಗ್ಗೆ ಸಾಧಕಿಗೆ ಬಂದ ಅನುಭವ ! ೩೪

ಅಧ್ಯಾಯ ೬ : ಸೌ. ಕುಲಕರ್ಣಿಯವರ ಸೇವೆಯಲ್ಲಿದ್ದ ಸಾಧಕಿಯರ ಮನಸ್ಸಿನ ವಿಚಾರಪ್ರಕ್ರಿಯೆ ೪೬

ಅಧ್ಯಾಯ ೭ : ಸೌ. ಕುಲಕರ್ಣಿಯವರ ಕುರಿತು ಸಾಧಕರು ಹೇಳಿದ ಗುಣವೈಶಿಷ್ಟ್ಯಗಳು ೫೮

ಅಧ್ಯಾಯ ೮ : ಕುಲಕರ್ಣಿ ಕುಟುಂಬದವರಿಂದ ಸಾಧಕರಿಗೆ ಕಲಿಯಲು ಸಿಕ್ಕಿದ ಅಂಶಗಳು ೯೩

ಅಧ್ಯಾಯ ೯ : 'ಸೌ. ಸುಜಾತಾ ಕುಲಕರ್ಣಿಯವರ ಮೃತ್ಯುವಿನ ನಂತರ ದೈನಿಕ 'ಸನಾತನ ಪ್ರಭಾತ'ದಲ್ಲಿ ಪ್ರಸಿದ್ಧವಾಗುವ ಲೇಖನಮಾಲಿಕೆಗೆ ಪರಾತ್ಪರ ಗುರು ಡಾ. ಆಠವಲೆಯವರು ಬರೆದ ವಿವಿಧ ಚೌಕಟ್ಟುಗಳು ಮತ್ತು ಅವುಗಳನ್ನು ಓದಿ ಸಾಧಕರು ಮಾಡಿದ ಪ್ರಶಂಸೆಗಳು', ಇವುಗಳ ಬಗ್ಗೆ ಕು. ತೃಪ್ತಿ ಕುಲಕರ್ಣಿಯ ವಿಚಾರಪ್ರಕ್ರಿಯೆ ೯೭

ಅಧ್ಯಾಯ ೧೦ : ಸಾಧಕಿಯ ಮನಸ್ಸಿನಲ್ಲಿ ಭವಿಷ್ಯಕಾಲದ ಸಂದರ್ಭದಲ್ಲಿನ ಚಿಂತೆಯ ವಿಚಾರ ಬರುತ್ತಿರುವಾಗ ದೇವರು 'ಪರಾತ್ಪರ ಗುರು ಡಾಕ್ಟರರು ನಿನ್ನನ್ನು ತುಂಬಾ ಮೇಲೆ ಒಯ್ದಿಟ್ಟಿದ್ದಾರೆ' ಎಂದು ಹೇಳಿ ಚಿಂತೆ ಮಾಡದಿರುವಂತೆ ಹೇಳುವುದು ಮತ್ತು ಅವಳ ತಾಯಿಯ ಮೃತ್ಯು ನಂತರ ಘಟಿಸಿದ ಘಟನೆಗಳ ನಂತರ ೧ ತಿಂಗಳಲ್ಲಿ ದೇವರು ಈ ವಾಕ್ಯವನ್ನು ನೆನಪಿಸುವುದು ೧೦೨

卐 **ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ** ೧೦೬

**ಪರಾತ್ಪರ ಗುರು ಡಾ. ಆಠವಲೆಯವರ ಆಧ್ಯಾತ್ಮಿಕ ಉತ್ತರಾಧಿಕಾರಿಗಳಾದ ಸದ್ಗುರು (ಸೌ.) ಬಿಂದಾ ಸಿಂಗಬಾಳ ಮತ್ತು ಸದ್ಗುರು (ಸೌ.) ಅಂಜಲಿ ಗಾಡಗೀಳ ಇವರ ಹೆಸರಿಗೆ ವಿಶಿಷ್ಟ ಆಧ್ಯಾತ್ಮಿಕ ಬಿರುದು ಸೇರಿಸಿರುವುದರ ಹಿಂದಿನ ಕಾರಣ**

ನಾಡಿಪಟ್ಟಿವಾಚನದ ಮಾಧ್ಯಮದಿಂದ ಸಪ್ತರ್ಷಿಗಳು ಸನಾತನಕ್ಕೆ ಮಾರ್ಗ ದರ್ಶನ ಮಾಡುತ್ತಾರೆ. ೧೩.೫.೨೦೨೦ ರಂದು ಸಪ್ತರ್ಷಿಗಳು, 'ಇನ್ನು ಮುಂದೆ ಸದ್ಗುರು (ಸೌ.) ಬಿಂದಾ ಸಿಂಗಬಾಳರನ್ನು 'ಶ್ರೀಸತ್‌ಶಕ್ತಿ (ಸೌ.) ಬಿಂದಾ ಸಿಂಗಬಾಳ' ಮತ್ತು ಸದ್ಗುರು (ಸೌ.) ಅಂಜಲಿ ಗಾಡಗೀಳರನ್ನು 'ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಗಾಡಗೀಳ' ಎಂದು ಸಂಬೋಧಿಸಬೇಕು; ಏಕೆಂದರೆ ಈ ಹೆಸರುಗಳಿಂದ ಇಬ್ಬರಿಗೂ ದೇವಿತತ್ತ್ವ ಸಿಗುವುದು, ಹಾಗೆಯೇ ಆ ರೀತಿ ಉಲ್ಲೇಖಿಸುವವರಿಗೂ ಇದರ ಲಾಭವಾಗುವುದು' ಎಂದು ಹೇಳಿದ್ದಾರೆ. ಸಪ್ತರ್ಷಿಗಳ ಆಜ್ಞೆಗನುಸಾರ ಈ ರೀತಿ ಸಂಬೋಧನೆ ಮಾಡಲಾಗು ತ್ತಿದೆ. ಇವರ ಹೆಸರಿನ ಸಂಬೋಧನೆಯ ಬಗ್ಗೆ ಪರಾತ್ಪರ ಗುರು ಡಾ. ಆಠವಲೆಯವರು "'ಶ್ರೀಸತ್‌ಶಕ್ತಿ'ಯು ಭಗವಂತನ ಶಾಶ್ವತ ಸ್ವರೂಪಕ್ಕೆ ಸಂಬಂಧಿಸಿದೆ ಮತ್ತು 'ಶ್ರೀಚಿತ್‌ಶಕ್ತಿ'ಯು ಭಗವಂತನ ವೈಶ್ವಿಕ ಜ್ಞಾನಕ್ಕೆ ಸಂಬಂಧಿಸಿದೆ" ಎಂದು ಹೇಳಿದರು.

**ಗ್ರಂಥದ ಮುಖಪುಟದ ಮೇಲಿರುವ ಚಿತ್ರದ ಬಗ್ಗೆ ವಿವರಣೆ**

'ಸ್ತ್ರೀಯರು ಸ್ಮಶಾನಕ್ಕೆ ಹೋಗಬೇಕಾದ ಸಂದರ್ಭ ಬಂದರೆ ಅವರು ಕೂದಲನ್ನು ಮುಕ್ತವಾಗಿ ಬಿಡಬೇಕು ಮತ್ತು ಶ್ವೇತ ವಸ್ತ್ರ ಧರಿಸಬೇಕು.' (ಆಧಾರ : ಧರ್ಮಸಿಂಧು, ನಿರ್ಣಯಸಿಂಧು, ಋಗ್ವೇದೀಯ ಬ್ರಹ್ಮಕರ್ಮ ಸಮುಚ್ಚಯ ಮತ್ತು ಪ್ರಯೋಗ ರತ್ನ [ನಾರಾಯಣ ಭಟ್ಟ])

## ವಿಷಯಸೂಚಿಯಲ್ಲಿನ ಕ್ರಮಾಂಕ ೨

# ಸೌ. ಸುಜಾತಾ ಕುಲಕರ್ಣಿ ಮತ್ತು ಅವರ ಕುಟುಂಬದವರು ಸಾಧನೆ ಮಾಡುತ್ತಿರುವುದರಿಂದ ಸೌ. ಸುಜಾತಾ ಕುಲಕರ್ಣಿಯವರ ಮೃತ್ಯುನಂತರವೂ ದೇವರ ಕೃಪೆ ಅನುಭವಿಸುವ ಕುಲಕರ್ಣಿ ಕುಟುಂಬ !

'ಪ್ರತಿಯೊಬ್ಬರ ಆಯುಷ್ಯದಲ್ಲಿ 'ಯಾವುದಾದರೊಬ್ಬ ಸಮೀಪದ ವ್ಯಕ್ತಿಯ ಮೃತ್ಯುವಾಗುವ' ಘಟನೆಯು ಯಾವಾಗಲಾದರೊಮ್ಮೆ ಖಂಡಿತವಾಗಿಯೂ ಘಟಿಸುತ್ತದೆ. ಹಿಂದೆ ಅವಿಭಕ್ತ ಕುಟುಂಬಗಳಿರುತ್ತಿದ್ದವು. ಆದ್ದರಿಂದ ಕುಟುಂಬದವರಲ್ಲಿ ಯಾರಿಗಾದರೂ ಗಂಭೀರ ರೋಗಗಳಾದರೆ, ಅವರಿಗೆ ಕುಟುಂಬದ ಇತರ ಸದಸ್ಯರು ಸಹಾಯ ಮಾಡುತ್ತಿದ್ದರು. ಕುಟುಂಬದಲ್ಲಿ ಯಾರದ್ದಾದರೂ ಮೃತ್ಯುವಾದರೆ ಕುಟುಂಬದಲ್ಲಿನ ಎಲ್ಲ ಜನರು ಒಟ್ಟಿಗೆ ಸೇರಿ ಮೃತ್ಯುನಂತರದ ವಿಧಿಗಳನ್ನು ಮಾಡುತ್ತಿದ್ದರು. ಪ್ರಸ್ತುತ ಗ್ರಂಥದಲ್ಲಿ ಉಲ್ಲೇಖಿಸಿದ ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಅಂಬರನಾಥದಲ್ಲಿನ ಕುಲಕರ್ಣಿ ಕುಟುಂಬವು (ಶ್ರೀ. ದೇವದತ್ತ ಕುಲಕರ್ಣಿ, ಅವರ ಪತ್ನಿ ಸೌ. ಸುಜಾತಾ ಕುಲಕರ್ಣಿ ಮತ್ತು ಅವರ ಮಗಳು ಕು. ತೃಪ್ತಿ) ಕಳೆದ ೧೦ ವರ್ಷಗಳಿಂದ ಗೋವಾದ ರಾಮನಾಥಿಯಲ್ಲಿರುವ ಸನಾತನದ ಆಶ್ರಮದಲ್ಲಿ ಬಂದು ವಾಸ್ತವ್ಯದಲ್ಲಿದ್ದಾರೆ. ಅವರಲ್ಲಿ ಸೌ. ಸುಜಾತಾ ಕುಲಕರ್ಣಿಯವರು ವರ್ಷವಿಡೀ ಗಂಭೀರ ಅನಾರೋಗ್ಯದ ನಂತರ ೨೦.೪.೨೦೨೦ ರಂದು ಮೃತರಾದರು. ಈ ಗ್ರಂಥದಲ್ಲಿ 'ಸೌ. ಕುಲಕರ್ಣಿಯವರ ಮೃತ್ಯುವನ್ನು ಕುಲಕರ್ಣಿ ಕುಟುಂಬದವರು ಸಾಧಕರ ಸಹಾಯದಿಂದ ಹೇಗೆ ಎದುರಿಸಿದರು, ಹಾಗೆಯೇ ಕುಲಕರ್ಣಿ ಕುಟುಂಬದವರ ಸಾಧನೆ ಇರುವುದರಿಂದ ಈ ಕಾಲದಲ್ಲಿ ಅವರು ದೇವರ ಕೃಪೆಯನ್ನು ಹೇಗೆ ಅನುಭವಿಸಿದರು' ಎಂಬುದನ್ನು ನೀಡಲಾಗಿದೆ. ಸೌ. ಕುಲಕರ್ಣಿಯವರ ಮೃತ್ಯುನಂತರ, ಹಾಗೆಯೇ ಮೃತ್ಯುನಂತರದ ವಿಧಿಗಳ ಸಮಯದಲ್ಲಿ ಮಾಡಿದ ಸೂಕ್ಷ್ಮದಲ್ಲಿನ ಪರೀಕ್ಷಣೆಗಳನ್ನೂ ಗ್ರಂಥದಲ್ಲಿ ನೀಡಲಾಗಿದೆ. ಇದನ್ನು ಓದಿ ಮೃತ್ಯುನಂತರದ ಸೂಕ್ಷ್ಮದಲ್ಲಿನ ಪ್ರಕ್ರಿಯೆ ಹೇಗಿರುತ್ತದೆ ಎಂಬುದು ಗಮನಕ್ಕೆ ಬರುವುದು. 'ಸೌ. ಕುಲಕರ್ಣಿಯವರ ಸಾಧನೆ ಇರುವುದರಿಂದ ಅವರ ಮೃತ್ಯುನಂತರದ ಪ್ರವಾಸವು ಸುಖಕರವಾಯಿತು' ಎಂಬುದು ಸೂಕ್ಷ್ಮಪರೀಕ್ಷಣೆಯಲ್ಲಿನ ವಿವೇಚನೆಯಿಂದ ತಿಳಿಯುತ್ತದೆ.

'ಪ್ರತಿಯೊಬ್ಬರಿಗೂ ಮೃತ್ಯುವು ಅನಿವಾರ್ಯವಾಗಿದೆ. ಮೃತ್ಯುನಂತರದ ಪ್ರವಾಸ ಸುಖಕರವಾಗಲು ಪ್ರತಿಯೊಬ್ಬರೂ ಜೀವನದಲ್ಲಿ ಸಾಧನೆ ಮಾಡುವುದು ಆವಶ್ಯಕವಾಗಿದೆ. ಅದನ್ನು ಮಾಡುವ ಬುದ್ಧಿ ಪ್ರತಿಯೊಬ್ಬರಿಗೂ ಬರಲಿ' ಎಂದು ಭಗವಾನ್ ಶ್ರೀಕೃಷ್ಣನ ಚರಣಗಳಲ್ಲಿ ಪ್ರಾರ್ಥನೆ !' – **(ಪರಾತ್ಪರ ಗುರು) ಡಾ. ಆಠವಲೆ (೨೭.೪.೨೦೨೦)**